

ನೋವಿನಿಂದಲೇ ಕರೆಸಿಕೊಳ್ಳಬೇಕಾದ ಪರಿಸ್ಥಿತಿ ಇಂದಿನದ್ದು.

ವರ್ತಮಾನದ ನೋವು–ನಲಿವುಗಳೇನೇ ಇದ್ದರೂ ಅದು ಮಂದ ಬೆಳಕೊಳಗಿನ ಮದಿರೆಯಲ್ಲಿ ಕರಗಿಬಿಡುತ್ತಿವೆ. ಇನ್ನುಳಿದವು ವರ್ಚುವಲ್ ಜಗತ್ತಿನ ಮಾಯೆಯೊಳಗೆ ಪ್ರೇತಾತ್ಮಗಳಂತೆ ಗಿರಕಿ ಹೊಡೆಯುತ್ತಿರುತ್ತವೆ. ಮಾಯಾದೇಗುಲದ ಮಾಯಾಪ್ರಸಾದವನ್ನು 'ಎನಗಿದುವೇ ಮಹಾಪ್ರಸಾದವಯ್ಯ' ಎಂದು ಸ್ವೀಕರಿಸುತ್ತಾ ನಾವು ಅನುಭವಿಸುವ ಸುಖ, ಕಂಡುಕೊಳ್ಳುವ ಪರಿಹಾರಗಳೆಲ್ಲ ಮಾಯಾಬಜಾರಿನಲ್ಲಿ 'ಒಂದು ಕೊಂಡರೆ ಒಂದು ಫ್ರೀ' ಎಂಬ ಘೋಷ ವಾಕ್ಯದಂತೆ ದೊರಕುವ ಉಚಿತ ಕೊಡುಗೆಗಳು. ಬಯಸಿದ್ದನ್ನು ಪಡೆದೇ ತೀರಬೇಕೆಂಬ ಹಟಕ್ಕೆ ಬಿದ್ದು ಸಿಗದುದಕ್ಕೆ ಹಪಹಪಿಸುತ್ತಾ, ಬಯಸಿದ್ದು ಸಿಗಲಿಲ್ಲವೆಂದು ಹಳಿಯುತ್ತಾ ಸಾಗುವ ನಮಗೆ ಬದುಕು ಹುಟ್ಟುಹಾಕಿದ ಹಳಿಯ ಉದ್ದದ ಅಂದಾಜಿರುವುದಿಲ್ಲ. ಕಣ್ಣಿಗೆ ಕಾಣದಷ್ಟು ನೀಳವಾಗಿ ಚಾಚಿರುವ ಹಳಿಯಲ್ಲಿ ವಿವಿಧ ಬಣ್ಣಗಳ, ರೂಪಗಳ, ಭಾವಗಳ ಅದೆಷ್ಟುಮಂದಿ ಪಯಣಿಗರು! ಒಬ್ಬೊಬ್ಬರದ್ದು ಒಂದೊಂದು ಜಗತ್ತು. ಸಿಂಗರಿಸಿ ಅಂದವಾಗಿಸಿಕೊಳ್ಳುವ ತವಕ–ತಲ್ಲಣಗಳಲ್ಲಿ ಸಾಮಾನ್ಯ. ಗೆಜ್ಜೆಕಟ್ಟಿ ಕುಣಿಯುವವರು, ತಾಳಕ್ಕೆ ತಣಿಯುವವರು, ಮೇಳಕ್ಕೆ ಹೊಂದುವವರು, ಬಣ್ಣಕ್ಕೆ ಅಂಜುವವರು, ಯೋಗಕ್ಕೆ ಕಾಯುವವರು, ಸಿದ್ಧಿಗೆ ಹಂಬಲಿಸುವವರು, ಕಾಡುವವರು, ನೆನೆಯುವವರು... ಹೀಗೆ ಹಳಿಯುದ್ದಕ್ಕೂ ಸಂಚರಿಸುವವರಿಗೇನೂ ಕೊರತೆಯಿಲ್ಲ. ಸ್ಮೃತಿ ಪಟಲದಲ್ಲಿ ಇವುಗಳೆಲ್ಲ ಒಂದೊಂದೇ ಅಚ್ಚಾಗುತ್ತಾ ಸಾಗುತ್ತಿರುತ್ತವೆ. ಒಂದೊಂದು ನಿಲ್ದಾಣದಲ್ಲೂ ಇಳಿಯುವವರನ್ನು ಇಳಿಸಿಕೊಂಡು, ಹತ್ತುವವರನ್ನು ಹತ್ತಿಸಿಕೊಂಡು, ಯಾವೊಂದು ಭೇದವನ್ನೂ ತೋರದೆ ತನ್ನ ಪಾಲಿನ ಕಾರ್ಯವನ್ನು ಅಚ್ಚುಕಟ್ಟಾಗಿ ಬದುಕಿನ ಬಂಡಿಯು ನಿಭಾಯಿಸುತ್ತಿರುತ್ತದೆ. ಹತ್ತುವವರೂ ಇಳಿಯುವವರೂ, ಹತ್ತುವುದು ಹಾಗೂ ಇಳಿಯುವುದು ಒಂದೇ ಬಾಗಿಲಿನಲ್ಲಾದರೂ, ಮನದ ಮನೆಗೆ ಮಾತ್ರ ಮೂರು ಮತ್ತೊಂದು ಬಾಗಿಲ ಚೌಕಟ್ಟು ಯಾಕೆ? ಕಣ್ಣಿಗೆ ಕಟ್ಟಿದ ಪಟ್ಟಿಯನ್ನು ತುಸುವಾದರೂ ಸರಿಸಬಾರದೇಕೆ? ಅರಿವಿನ ವಿಸ್ತಾರವಾದರೂ ವಿಸ್ತಾರಗೊಳ್ಳುವುದಿಲ್ಲವೇಕೆ ?

ಬದುಕು ನಿಂತ ನೀರಾಗದೆ ಹರಿಯುವ ನೀರಾಗಬೇಕು. ಶಾಪಗ್ರಸ್ತ ನಿಂತನೀರು ಸೃಜಿಸುವ ರೋಗಗ್ರಸ್ತ ಕ್ರಿಮಿಕೀಟಗಳು ಮತ್ತವುಗಳು ದಯಪಾಲಿಸುವ ಕೊಚ್ಚೆಕೊಳೆಯ ಉಡುಗೊರೆಯ ಬದುಕು ಸಲೀಸಾಗಿ ಹರಿಯುತ್ತಿಲ್ಲ ಎನ್ನುವುದರ ಸೂಚ್ಯ. ಒರತೆಯೊಡೆದು ಚಿಮ್ಮುವ ನೀರು ಹಳ್ಳವಾಗಿ, ತೊರೆಯಾಗಿ, ನದಿಯಾಗಿ ಕಾಡು–ಮೇಡುಗಳಲ್ಲಿ, ಬಂಡೆ–ದಿಬ್ಬಗಳ ಮೇಲೆ ತುಳುಕುತ್ತಾ, ಬಳುಕುತ್ತಾ ಝುಳಪಿಸಿಕೊಂಡು ನಿರಾಭರಣ ಸಲಿಲೆಯಾಗಿ ಹರಿದು ಸಾಗುವಾಗ ಹರಿವ ನೀರಿಗೆ ಸಿಗುವ ಉಲ್ಲಾಸ–ಉನ್ಮಾದಗಳ ಲಹರಿಯ ಭಾಗ್ಯ ನಿಂತ ನೀರಿಗೆಲ್ಲಿ ಸಿಗಬೇಕು ಹೇಳಿ! ಇದು ಭಾಗ್ಯ ನಮ್ಮದು ಎಂದು ಹಾಡಿ ನಾವದನ್ನು ಸ್ವೀಕರಿಸಬೇಕು. ಅಂತಹ ಹರಿವ ನೀರಿನ ಭಾಗ್ಯವನ್ನು ಬೊಗಸೆಯಲ್ಲಿ ಹಿಡಿದು ಕುಡಿದೇಬಿಡಬೇಕು. ಇಂದ್ರಿಯಗಳನ್ನು ಅದ್ದಿಸಿ ಪುಳಕಿತರಾಗಬೇಕು. ಸಾಧ್ಯವಾದರೆ ಮೈ ಮೇಲೊಂದಿಷ್ಟು ಸುರಿದುಕೊಳ್ಳಬೇಕು. ಹರಿವನೀರ ಲಹರಿಯಲ್ಲಿ ಮುಳುಗೆದ್ದು ನಲಿಯಬೇಕು.



ಹರಿವನೀರು ಸೃಜಿಸಿದ ಉನ್ಮಾದದಲ್ಲಿ ಮಿಂದೆದ್ದು ಬೆಳಗಬೇಕು. ಆಗಲೇ ಅದರ ಆಳ–ಅಗಲ, ವಿಸ್ತಾರ, ವೈವಿಧ್ಯ ಮತ್ತು ಸೊಬಗನ್ನು ಅರಿತು ಅನುಭವಿಸಲು ಸಾಧ್ಯ. ಅಂತಹ ಅನುಭವ ನಮ್ಮ–ನಿಮ್ಮ ಹೃದಯ ಪದ್ಮದೊಳಗಾಗಬೇಕು.

ಬದುಕಲ್ಲಿ ಅಗಲುವಿಕೆ ಅನಿವಾರ್ಯವೇ ಸರಿ. ಬದುಕೆಂದರೆ ಅಗಲುವಿಕೆಯೇ! ಆಗಲೂ ಈಗಲೂ ಸದಾ ಕಣ್ಣಿಗೆ ಕಾಣುವ ನಿತ್ಯ ಸತ್ಯವೊಂದಿದ್ದರೆ ಅದು ಅಗಲುವಿಕೆ ಮಾತ್ರ. ಆಗುವುದೆಲ್ಲಾ ಆಗಲಿ ಜೊತೆಯಲ್ಲಿ ಅಗಲಿಕೆಯೂ ಇರಲಿ ಎಂದಷ್ಟೇ ಬೇಡಿಕೊಳ್ಳಬೇಕು. ಅಗಲಿಕೆಯ ಹರಿವನ್ನು ನಿಲ್ಲಿಸಲು ಸಾಧ್ಯವಿಲ್ಲ. ಹರಿವಿನಲ್ಲಿರುವ ಈ ನಡೆ 'ಹರಿ'ಯೆಡೆಗೆ ಎಂದಾದರೆ; ಪ್ರಜ್ಞೆಯೊಳಗೆ ಸೌಂದರ್ಯವಿದ್ದಂತೆ ಹರಿಯುವುದರಲ್ಲೂ ಒಂದು ಅನುಭೂತಿಯಿದೆ, ಪ್ರಾಂಜಲ ಮನದ ಸುಖವಿದೆ.

ಹೊಕ್ಕುಳ ಬಳ್ಳಿ ಕತ್ತರಿಸಿ ಮಗು ಬೇರ್ಪಡಬೇಕೆನ್ನುವುದು ನಿಯಮ. ಅದೇ ಮಗು ಬೆಳೆದಂತೆಲ್ಲಾ ಒಂದಲ್ಲಾ ಒಂದು ಕಾರಣಕ್ಕೆ, ಒಂದಲ್ಲಾ ಒಂದು ವಿಷಯವಾಗಿ ದೂರವಾಗುತ್ತಿರುತ್ತದೆ ಮತ್ತು ದೂರವಾಗಬೇಕು ಕೂಡ. ಹೀಗೆ ಬೆಳೆಯುತ್ತಾ ಸಾಗುವಾಗ ದೂರವಾಗುತ್ತಾ, ಹತ್ತಿರ ಸುಳಿಯುತ್ತಾ ಮತ್ತೆ ಅಗಲುತ್ತಾ ವಿರಮಿಸುತ್ತಾ ನಡೆಯುತ್ತಿರಬೇಕು. ಅಗಲಿಕೆಯ ನೋವು ಹೆಚ್ಚಿದಂತೆಲ್ಲಾ, ಅಗಲಿ ಬಂದದ್ದರ ನೆನಪೂ ಅಷ್ಟೇ ತೀವ್ರವಾಗಿ ಕಾಡುತ್ತಿರುತ್ತದೆ. ಕಾಡುವುದು ಅನಿವಾರ್ಯ ಕರ್ಮ. ಹಾಗೆ ಕಾಡುತ್ತಿರಬೇಕಾದುದು ಧರ್ಮ. ಕಾಡುತ್ತ, ಕಾಡುತ್ತಾ ಸಾಗುವ ಕಾಡಿನ ಹಾದಿಯಲ್ಲಿ ಮತ್ತಿವುಗಳೇ ಪುನಃ ಎದ್ದುಬಂದು ನಮ್ಮನ್ನು ಮತ್ತೆ ಮತ್ತೆ ಕಾಡುವಂತಿರಬೇಕು. ಹಾಗಿರಬೇಕು ಕಾಡುವಿಕೆ. ಕಾಡದೆ, ನೆನೆಯದೆ ಭಾವಲೋಕದ ಅರಿವು ನಮಗೊದಗುವುದಿಲ್ಲ. ಹಾಗಾಗಿ ಕಾಡುವಿಕೆಗಿಂತ ತಪವು ಇಲ್ಲ!

ಮರಳಿ ಬರಬೇಕೆಂದರೆ ನೆನೆಯಲೇಬೇಕು. ಭಾವ ಜೀವನವಿರುವುದೇ ನೆನೆಯುವಿಕೆಯಲ್ಲಿ. ಸಮಷ್ಟಿಯಲ್ಲಿ ಒಂದಾಗಿದ್ದಾಗ ಎಲ್ಲವೂ ಒಂದೇ ಆಗಿರುತ್ತದೆ. ಸ್ವಂತ ವ್ಯಕ್ತಿತ್ವವನ್ನು ರೂಪಿಸಲು, ಪ್ರತಿಷ್ಠೆಯನ್ನು ಸ್ಥಾಪಿಸಲು, ಸ್ವಹಿತಾಸಕ್ತಿಯನ್ನು ಪೊರೆಯಲು ಹಿಂಡನ್ನು ಬಿಟ್ಟುಬರುವ ತವಕದಲ್ಲಿ ಭಾವಜೀವದ ಬಗ್ಗೆ ನಾವು ಚಿಂತಿಸಿರುವುದಿಲ್ಲ. ಮುಂದೆ ಬಾಯಾರಿದಾಗ ನೀರನ್ನು ಹುಡುಕಿಕೊಂಡು ಹೋಗುತ್ತೇವೆ ನೋಡಿ, ಆಗ ಮರಳಿ ಕಾಡುವ ನೆನಪುಗಳು ದಾರಿಯುದ್ದಕ್ಕೂ ಕಾಡಿನ ಸೌಗಂಧಿಕಾದಂತೆ ಕಾಡುತ್ತಲಿರುತ್ತವೆ. ನಿಜವಾದ ಭಾವಜೀವದ ಅರಿವು ಉಂಟಾಗುವುದು, ಹಿಂಡಿನ ನೆನಪು ಕಾಡುವುದು, ಸಮಷ್ಟಿಯೊಳಗೆ ಒಂದಾಗಬೇಕೆನ್ನುವ ಭಾವಗಳು ಹೊಮ್ಮುವುದೆಲ್ಲಾ ಈ ಗಳಿಗೆಯಲ್ಲೇ!

ಕದಡಿದ ನೀರು ತಿಳಿಯಾದ ಮೇಲೆಯೇ ಕುಡಿಯಲು ತಿಳಿನೀರು ಸಿಗುವುದು. ಅಂತೆಯೇ ಮಾತು ತಿಳಿಯಾಗದೆ ಮನಸ್ಸು ತಿಳಿಯಾಗಲಾರದು, ಮನಸ್ಸು ತಿಳಿಯಾಗದ ಹೊರತು ಹೊಸಬೆಳಕೊಂದು ಮೂಡಿಬಾರದು. ಒಳನೋಟಗಳು ಅರಿವನ್ನು ಮೂಡಿಸುವ ಪರಿಕರಗಳಾಗಬೇಕು. ಅರಿವುಗಳೇ ಇರವನ್ನು ಸೂಚಿಸುವ ಮಾಪನಗಳು. ಅರಿವು ಚಿತ್ರಿಸುವ ನೆನಪುಗಳು ನಮಗೆ ಮರಳಿ ಹೊರಳಿ ಬರುವುದಕ್ಕೆ ಎಡೆ ಮಾಡಿಕೊಡುತ್ತವೆ. ಯಾವುದರಿಂದ ನಾವು ಅಗಲಿ ಬಂದೆವೋ ಅದರ ನೆನಪು ತೀವ್ರವಾಗಿ ಕಾಡುತ್ತಾ ಬದುಕು ಸೋಜಿಗವೆನಿಸಿಕೊಳ್ಳುವುದು, ಅಗಲುವಿಕೆಯ ದೀರ್ಘಾವಧಿಯನ್ನು ಕಡಿತಗೊಳಿಸುವುದೆಲ್ಲಾ ಇದೇ ನೆನಪು.

ಈ ನೆನಪೇ ಹಾಗೆ, ಮುಂಜಾವು ಇಬ್ಬನಿಯ ಹೊತ್ತು ತರುವಂತೆ. ಹಿಡಿಯಹೋದರೆ ಮೈಯನ್ನೆಲ್ಲಾ ಒದ್ದೆಯಾಗಿಸುವ ನೀರ ಪಸೆಯಂತೆ. ನೆಲವ ತಬ್ಬಿ ಸೂಸುವ ಗಂಧದಂತೆ. ಮಂಜಿನ ದಾರಿಯಲಿ ಮಸುಕಾಗಿ ಕಂಡ ಗೆಳತಿಯ ಮುಖದಂತೆ. ಅವಳ ತುರುಬಲ್ಲಿ ಪವಡಿಸಿದ ಮಲ್ಲಿಗೆ ಹೂವಿನ ಪರಿಮಳದಂತೆ.